# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 233 |
| 2 | ಸದಸ್ಯರ ಹೆಸರು | : | ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 06-03-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರೂ.54964.00 ಕೋಟಿ ಅಂದಾಜು ವೆಚ್ಚದ ನಗರದ ಸಮಗ್ರ ಸಂಚಾರಿ ಸುಧಾರಣೆ ಯೋಜನೆಯಡಿ 42 ಕಿ.ಮೀ ಉದ್ದದ ಎತ್ತರಿಸಿದ ರಸ್ತೆ ಹಾಗೂ ಡಬ್ಬಲ್ ಡೆಕ್ಕರ್ ರಸ್ತೆ ಒಳಗೊಂಡಂತೆ ಸುಮಾರು 20 ರಸ್ತೆ ಸಂಚಾರ ಮೂಲಸೌಕರ್ಯ ಯೋಜನೆಗಳು ವಿಸ್ತೃತ ಯೋಜನಾ ವರದಿ ಸಿದ್ಧ ಪಡಿಸಿಲಾಗಿದೆ ಎಂದು ಮಾಧ್ಯಮ ವರದಿಗಳು ಪ್ರಕಟಣೆ ಮಾಡಿದ್ದು ಈ ಎಲ್ಲಾ ಯೋಜನೆಗಳ ಪ್ರಸ್ತುತ ಸ್ಥಿತಿಗತಿ ಕುರಿತಂತೆ ಮಾಹಿತಿ ನೀಡುವುದು; | <u>ವಾಹನ ಸುರಂಗ ಮಾರ್ಗ (40 ಕಿ.ಮೀ.):</u><br>• ಪೂರ್ವ-ಪಶ್ಚಿಮ ವಾಹನ ಸುರಂಗ ಮಾರ್ಗ ಯೋಜನೆಯು ಆಡಳಿತಾತ್ಮಕ ಯೋಜನೆ ಹಂತದಲ್ಲಿದೆ.<br>• ಉತ್ತರ-ದಕ್ಷಿಣ ವಾಹನ ಸುರಂಗ ಮಾರ್ಗ ಯೋಜನೆಯು ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲು ಟೆಂಡರ್ ಕರೆಯುವ ಹಂತದಲ್ಲಿದೆ.<br><u>ಮೇಲ್ಸೇತುವೆಗಳು (110.00 ಕಿ.ಮೀ.):</u><br>• ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸುವ ಹಂತದಲ್ಲಿದೆ<br><u>ಡಬ್ಬಲ್ ಡೆಕ್ಕರ್ (ಸಂಯುಕ್ತ ಮೆಟ್ರೋ ರಸ್ತೆ ಮೇಲ್ಸೇತುವೆ ಯೋಜನೆ) [40.00 ಕಿ.ಮೀ.]:</u><br>• ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸುವ ಹಂತದಲ್ಲಿದೆ<br><u>ವೈಟ್ ಟಾಪಿಂಗ್ ಯೋಜನೆ (157.00 ಕಿ.ಮೀ.):</u><br>• ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸುವ ಹಂತದಲ್ಲಿದೆ<br><u>ಮಳೆ ನೀರು ಚರಂಡಿಯ ಪಕ್ಕದಲ್ಲಿ ರಸ್ತೆ ಸಂಪರ್ಕ ಯೋಜನೆ (300.00 ಕಿಮೀ.):</u><br>• ಅಧಿಸೂಚನೆ ಹೊರಡಿಸುವ ಹಂತದಲ್ಲಿದೆ |
| ಆ) | ಈ ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಹಣಕಾಸು ವ್ಯವಸ್ಥೆ ಕುರಿತಂತೆ ಸರ್ಕಾರದ ಯೋಜನೆಯೇನು; (ಮಾಹಿತಿ ನೀಡುವುದು) | • ಬೃಹತ್ ಬೆಂಗಳೂರು ಪಾಲಿಕೆಯ ಸ್ವಂತ ಸಂಪನ್ಮೂಲಗಳಾದ Premium FAR, ಜಾಹೀರಾತು ತೆರಿಗೆ, ಆಸ್ತಿ ತೆರಿಗೆಯಿಂದ ಹೆಚ್ಚುವರಿ ಹಣಕಾಸು ವ್ಯವಸ್ಥೆ, ಬಾಹ್ಯ ಖಾಸಗಿ ಸಂಸ್ಥೆಗಳಿಂದ ಆರ್ಥಿಕ ನೆರವು ಹಾಗೂ ರಾಜ್ಯ ಸರ್ಕಾರದ ಅನುದಾನವನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. |
| ಇ) | ಬಿ.ಬಿ.ಎಂ.ಪಿಯ ಈ ಪ್ರಸ್ತಾವಿತ ಯೋಜನೆಗಳು ಉದ್ದೇಶಿತ ಸಂಚಾರ ಸುಧಾರಣೆ ಬದಲಾಗಿ ಅನೇಕ ಪ್ರತಿಕೂಲ ಪರಿಣಾಮ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಉಂಟಾಗುವ ವರ್ಷಗಟ್ಟಲೆ ಅವಧಿಯ ವಿಳಂಬ ಮತ್ತು ಕಾಮಗಾರಿ ವೆಚ್ಚ ನಿರೀಕ್ಷಿತ ಉದ್ದೇಶ ಪೂರೈಸುವ ಸಾಧ್ಯತೆ ಇಲ್ಲದಿರುವ ಕಾರಣ ನಾಗರಿಕರ ಮೇಲೆ ಆಗಾದ ಹಾಗೂ ಅನಗತ್ಯ ಹೊರೆ ಕುರಿತಂತೆ ಪೂರ್ಣ ಮಾಹಿತಿ ನೀಡುವುದು; | • ಅನುಷ್ಠಾನಗೊಳಿಸುವಾಗ ಸಾರ್ವಜನಿಕರಿಗೆ ತೊಂದರೆ, ಪ್ರತಿಕೂಲ ಪರಿಣಾಮ, ಕಾಮಗಾರಿ ವಿಳಂಭವನ್ನು ಹೆಚ್ಚಿನ ರೀತಿಯಲ್ಲಿ ಕಡಿಮೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. |

. . . 2 .

| | | |
|---|---|---|
| ಈ) | ಸುರಂಗ ರಸ್ತೆ ವ್ಯವಸ್ಥೆಯು ಸಂಚಾರ ಸಮಯವನ್ನು ಕಡಿಮೆಗೊಳಿಸಿ ಸುರಂಗದ ಪ್ರವೇಶ ಹಾಗೂ ನಿರ್ಗಮನ ಪ್ರದೇಶಗಳಲ್ಲಿ ಉಂಟಾಗುವ ಅತೀವ ವಾಹನ ದಟ್ಟನೆ ಈ ಸಂಚಾರ ಸಮಯದ ಉಳಿಕೆಯನ್ನು ನಿರರ್ಥಕಗೊಳಿಸುವುದಿಲ್ಲವೇ; | • ಯೋಜನೆಯನ್ನು ತಜ್ಞರ ಸಾಧಕಬಾಧಕಗಳ ವರದಿಗಳನ್ವಯ ನಗರದ ಸರ್ವತೋಮುಖಿ ಅಭಿವೃದ್ಧಿ ಹಾಗೂ ಎಲ್ಲಾ ವರ್ಗದ ಪ್ರಯಾಣಿಕರಿಗೂ ಅನುಕೂಲವಾಗುವಂತೆ ಸಿದ್ಧಪಡಿಸಿರುವುದರಿಂದ ನಿರರ್ಥಕಗೊಳಿಸುವುದಿಲ್ಲ. |
| ಉ) | ಈ ಎಲ್ಲಾ ಕಾಮಗಾರಿಗಳಿಗೆ ಅವಶ್ಯವಿರುವ ಜಮೀನು ವಶ ಪಡೆಯಲು ಇರುವ ಅನಾನುಕೂಲತೆಗಳೇನು; ಇನ್ನಿತರ ಮಹತ್ವದ ಅಂಶಗಳ ಕುರಿತಂತೆ ಸಿವಿಲ್ ಸೊಸೈಟಿ ನಡೆಸಿರುವ ವಿಚಾರ ಸಂಕರಣದಲ್ಲಿ ಭಾರತೀಯ ವಿದ್ಯಾಸಂಸ್ಥೆಯ ರಸ್ತೆ ಸಂಚಾರ ತಜ್ಞ ಶ್ರೀ ಅಶೀಶ್ ವರ್ಮ ಅವರನ್ನೊಳಗೊಂಡಂತೆ ಅನೇಕ ತಜ್ಞರ ಅಭಿಪ್ರಾಯ ವ್ಯಕ್ತ ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಸದರಿ ಅಂಶಗಳ ಗಂಭೀರ ಪರಿಣಾಮಗಳ ನಿವಾರಣೆಗೆ ಕುರಿತಂತೆ ಸರ್ಕಾರ ಕೈಗೊಂಡಿರುವ ಕಾರ್ಯ ಯೋಜನೆ ಕುರಿತು ವಿವರ ಒದಗಿಸುವುದು? | • ಬೆಂಗಳೂರು ನಗರದ ಸಿವಿಲ್ ಸೊಸೈಟಿ ಸಂಕೀರ್ಣದಲ್ಲಿ ರಸ್ತೆ ಸಂಚಾರ ತಜ್ಞ ಶ್ರೀ ಅಶೀಶ್ ವರ್ಮ ರವರ ವಿಮರ್ಶೆಯನ್ನು ಪರಿಶೀಲಿಸಲಾಗಿ, ನಗರದ ಸರ್ವತೋಮುಖಿ ಅಭಿವೃದ್ಧಿ ಹಾಗೂ ಎಲ್ಲಾ ವರ್ಗದ ಪ್ರಯಾಣಿಕರಿಗೂ ಅನುಕೂಲವಾಗುವಂತೆ ಯೋಜನೆಗಳನ್ನು ರೂಪಿಸಲಾಗಿದೆ. |

**ನಅಇ 97 ಎಂಎನ್‌ವೈ 2025 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ